SRI MALLIKARJUNA M. KHARGE.—We have already raised this point. You have said that:

> "At present the Municipal Councils do not have adequote funds for implementing water supply schemes efficiently. It is proposed to take over the maintenance of water supply schemes by Government and to entrust them to the Karnataka Urban Water Supply and Drainage Board. Therefore, it is proposed to levy 10 per cent water supply cess on property tax to raise the necessary resources for the purpose."

We would like to know what are the resources; how much amount you are getting; how many schemes you are going to implement; what is the amount you require ? You should tell us all these things. You have not brought out the financial memorandum. Whether this 10 per cent cess is sufficient to cope up with all the pending schemes; how many schemes are pending in the municipal areas? Without all these information how can this bill be taken up?

MR. SPEAKER.—You will take up this Bill tomorrow.

SRI MALLIKARJUNA M. KHARGE.—Agreed.

೧೯೮೬ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು) (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್. – ಮಾನ್ಯ ಅಧ್ಯಕ್ಷರೇ, ಇದನ್ನು ಟೆಕ್ನಿಕಲ್ ಆಗಿ ಮಾಡಬೇಕಾಗಿದೆ. ಈಗಿರುವ ಕಾನೂನು ಪ್ರಕಾರ, "Additional Secretary to Government Planning Department (Command Area Development) is one of the members of the Authority" ಎಂದು ಇದೆ. ಸರ್ಕಾರದವರು ಏನು ಮಾಡಿದ್ದಾರೆ, "However, by Govt, Order dated 29th November 1983 the subject relating to Command Area Development was transferred from the planning Department to the Public works, Command Area Development and Electricity Department and hence it is necessary to amend this. ಇದನ್ನು ಮಾಡತಕ್ಕಂಥಾದ್ದು ಸರಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಾವು ಅನೇಕ ಸಾರಿ ಹೇಳಿದ್ದೀರಿ. ಲೆಜಿಸ್ಲೇಟರ್ಸ್‌ಗೆ ಒಂದು ಬೆಲೆ ಇರಬೇಕು ಎಂದು ಹೇಳಿದ್ದೀರಿ. ನಾನು ಇದರಲ್ಲಿ ಎಂ.ಎಲ್.ಎ. ಹೆಸರನ್ನು ಸೇರಿಸಿಕೊಳ್ಳಿ ಎಂದು ಹೇಳಿದ್ದೇನೆ. ಕೋಲಾರ ಜಿಲ್ಲೆ ಕಮಾಂಡ್ ಏರಿಯಾ ಬರುವುದಿಲ್ಲ, ಇದರಲ್ಲಿ ಅಂತಹ ಕಾಂಟ್ರವರ್ಸಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಂದು ಶಾಲೆಗೆ, ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಇರುತ್ತದೆ. ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ವಿಸಿಟರ್ಸ್ ಬೋರ್ಡ್ ಎಂದು ಮಾಡಿದ್ದೀರಿ. Command Area Development Board is also important. ನಾವು ಸಾರ್ವಜನಿಕರಿಂದ ಆರಿಸಿ ಬಂದು ನಮಗೆ ಇಲ್ಲಿ ವಾಯ್ಸ್ ಇಲ್ಲ ಎಂದರೆ ಹೇಗೆ? Who should represent on behalf of the farmers? You are trusting only the Secretaries. You don't trust the elected representatives. What is the meaning? ಮಾಮೂಲಿ ಒಂದು ಸ್ಕೂಲ್ ಇದ್ದರೆ, ಸ್ಕೂಲ್ ಬೆಟರ್‌ಮೆಂಟ್ ಕಮಿಟಿ ಮಾಡುತ್ತೀರಿ. ಅದೇರೀತಿಯಾಗಿ ಒಂದು ಅಡ್ವೈಸರಿ ಬೋರ್ಡ್ ಮಾಡಿ. ಅದರಲ್ಲಿ ಲೆಜಿಸ್ಲೇಟರ್ಸ್ ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಸೇರಿಸಿ. ನಿಮಗೆ ಏನು ತಾಪತ್ರಯ ಇದೆ. ಮಾನ್ಯ ಸದಸ್ಯರು ಕೊಟ್ಟಂತಹ ಅಮೆಂಡ್‌ಮೆಂಟ್ ಒಪ್ಪಿಕೊಳ್ಳಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ತಂದಿರತಕ್ಕ ತಿದ್ದುಪಡಿ ಚೌಕಟ್ಟಿನಲ್ಲಿ, ಮಾನ್ಯ ಸದಸ್ಯರು ಹೇಳಿರತಕ್ಕಂಥ ತಿದ್ದುಪಡಿ ಬರುವುದಿಲ್ಲ. ಅದು ಪ್ರತ್ಯೇಕವಾದುದು. ಈಗ ಅವರು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮುಂದೆ ನೋಡೋಣ.

ಶ್ರೀ ಆರ್. ವೆಂಕಟರಾಮಯ್ಯ.—ಎಂ.ಎಲ್.ಎ. ಅವರನ್ನು ಸೇರಿಸುತ್ತೀರಾ, ಇದರ ಬಗ್ಗೆ ಭರವಸೆ ಕೊಡಿ.

ಅಧ್ಯಕ್ಷರು.—ಅವರು ನೋಡೋಣ ಎಂದು ಹೇಳಿದ್ದಾರೆ, ತಾವು ದಯವಾಡಿ ಕುಳಿತುಕೊಳ್ಳಿ. ನಾನು ಅಮೆಂಡ್‌ಮೆಂಟ್ಸ್ ಕಮಿಟಿಗೆ ಬಾಕಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ರಾಜ್ಯದ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ಪರ್ಯಾಲೋಚಿಸುವುದು

೨ನೇ ಖಂಡ.—

ಅಧ್ಯಕ್ಷರು.—''೨ನೇ ಖಂಡವು ಈ ವಿಧೇಯಕ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೨ನೇ ಖಂಡವು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ನಾನು ವಿಧಾನಸಭೆಯ ಅಧ್ಯಕ್ಷತೆ ವಹಿಸುವವರ ಹೆಸರುಗಳ ಪಟ್ಟಿಯಲ್ಲಿರುವ ಶ್ರೀ ಹೆಚ್.ಟಿ. ಕೃಷ್ಣಪ್ಪನವರ ಸ್ಥಾನದಲ್ಲಿ ಶ್ರೀ ಹೆಚ್.ಜಿ. ಗೋವಿಂದೇಗೌಡರನ್ನು ನಾಮನಿರ್ದೇಶನ ಮಾಡಿರುತ್ತೇನೆ.

ನಿಯಮ ೬೮ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಗೋಲೀಬಾರ್ ಹಾಗೂ ಕೋಮು ಘರ್ಷಣೆ ಮತ್ತು ಭಾಷಾ ವಿವಾದಗಳ ಬಗ್ಗೆ

೩-೦೦ ಪಿ. ಎಂ.

ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲಾವಧಿ ಚರ್ಚೆ

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದವರಾದ ನಾವು ಒಂದು ನಿಲುವಳಿ ಸೂಚನೆಯನ್ನು ಈ ಸದನದ ಕಾರ್ಯಕಲಾಪಗಳು ಪ್ರಾರಂಭ ಆದಾಗ ತಮ್ಮ ಗಮನಕ್ಕೆ ತಂದೆವು. ಅದು ಬಹಳ ಪ್ರಮುಖವಾಗಿರ ತಕ್ಕಂಥ ವಿಚಾರ. ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿರುವ ವಿಚಾರ. ಈ ಸದನ ಈ ಸಾರಿ ಸೇರುವುದಕ್ಕಿಂತ ಮೊದಲು

MR. DEPUTY SPEAKER.—In the Chair.

ರಾಮನಗರ, ಗುಲ್ಬರ್ಗಾ ಜಿಲ್ಲೆಯ ಆಳಂದ್ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಗೋಲೀಬಾರ್ ಆಗಿರ ತಕ್ಕಂಥ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ನಾವು ಕಳುಹಿಸಿದ್ದೆವು. ತಾವು ನಾವು ಪ್ರಾಸ್ತಾವಿಕವಾಗಿ ಮಾತನ್ನು ಹೇಳುವುದಕ್ಕಿಂತ ಮುಂಚಿತವಾಗಿ ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬಹುದು ಎಂಬ ಒಂದು ತೀರ್ಮಾನ ಮಾಡಿದ್ದೇವೆ ಎಂಬ ಮಾತನ್ನು ಅಧ್ಯಕ್ಷರಾದ ತಾವು ತಿಳಿಸಿದ್ದೀರಿ. ನಾವು ಅದನ್ನು ಬಿಟ್ಟಿಲ್ಲ. ಆನಂತರ ಒಂದು ಚರ್ಚೆ ಈ ಸದನದಲ್ಲಿ ಆಗಬೇಕು, ಈ ವಿಷಯ ಚರ್ಚೆ ಆಗ ತಕ್ಕಂಥ ಸಂದರ್ಭದಲ್ಲಿ ಈ ಸದನದ ಮಾನ್ಯ ಸದಸ್ಯರುಗಳು, ಈ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಈ ಒಂದು ಚರ್ಚೆಯಲ್ಲಿ ಭಾಗವಹಿಸಿ, ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಜಿಲ್ಲೂವ ಸದವಕಾಶ ತಾವು ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿಯಮಾವಳಿ ೬೮ರ ಪ್ರಕಾರ ಇದನ್ನು ಮಾಡಿಕೊಟ್ಟಿದ್ದೀರಿ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರತಕ್ಕಂಥ ಪ್ರಶ್ನೆ, ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿ ಜನರು ಸತ್ತಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ. ಒಟ್ಟು ಸತ್ತಿರತಕ್ಕಂಥ ಜನರ ಸಂಖ್ಯೆ, ಗುಲ್ಬರ್ಗಾ ಜಿಲ್ಲೆಯ ಆಳಂದ್‌ನಲ್ಲಿ ಮೂರು ಸಾವು, ಗೋಲೀಬಾರ್‌ನಲ್ಲಿ ಸತ್ತಿರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.